# ಪ್ರಥಮ ಸಂಕಲನಾತ್ಮಕ ಮೌಲ್ಯಮಾಪನ ಪರೀಕ್ಷೆ : 2025–26

## ಪ್ರಥಮ ಭಾಷೆ ಕನ್ನಡ

**ಗರಿಷ್ಠ ಅಂಕ : 40** **8ನೇ ತರಗತಿ** **ಅವಧಿ:1.ಗಂಟೆ 30 ನಿಮಿಷ**

---

**I. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಉತ್ತರವನ್ನು ಬರೆಯಿರಿ.**

**1. ಕನ್ನಡ ವರ್ಣಮಾಲೆಯಲ್ಲಿನ ಒಟ್ಟು ಅಕ್ಷರಗಳ ಸಂಖ್ಯೆ ;** **1*2=2**

(ಎ) 49 (ಬಿ) 9

(ಸಿ) 25 (ಡಿ) 13

**2. ನಾಮಪದದ ಬದಲಿಗೆ ಬಳಸುವ ಪದಗಳು ;**

(ಎ) ಭಾವನಾಮಗಳು (ಬಿ) ಗುಣವಾಚಕಗಳು

(ಸಿ) ದಿಗ್ವಾಚಕಗಳು (ಡಿ) ಸರ್ವನಾಮಗಳು

**II. ಈ ಕೆಳಗಿನ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀಪದವನ್ನು ಬರೆಯಿರಿ.** **1*2=2**

3. ಧರ್ಮ : ಅಧರ್ಮ : : ಬಡವ : ________________

4. ರಾಣಿ : ರಾಣಿಯರು : : ಮಗು : ________________

**III. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.** **1*4=4**

5. ನೀರು ಕೊಡುವ ಸಂಪ್ರದಾಯ ಎಲ್ಲೆಲ್ಲಿ ಇಲ್ಲ?
6. ಗಾಳಿಯಲ್ಲಿ ಬೂದಿಯನ್ನು ತೂರಿದಾಗ ಎಲ್ಲಿ ಬೀಳುತ್ತದೆ?
7. ಯುವಕನ ತಂಗಿಯ ಹೆಸರೇನು?
8. ನೆಹರುರವರು ಯಾರಿಗೆ ಪತ್ರ ಬರೆದಿದ್ದಾರೆ?

**IV. ಈ ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **2*3=6**

9. ವಿದೇಶಗಳಲ್ಲಿ ಬಾಯಾರಿಕೆಗೆ ಧಾರಾಳವಾಗಿ ಏನೇನು ದೊರೆಯುವವು?
10. ರಾಜನನ್ನು ಪೀಠದಲ್ಲಿ ಕುಳ್ಳಿರಿಸಿ ಯಶೋಧರೆ ಏನೆಂದು ವಿನಂತಿಸುತ್ತಾಳೆ?
11. ಭಟ ಮತ್ತು ದ್ವಿಜರ ಲಕ್ಷಣಗಳೇನು?

**V. ಈ ಸಾಹಿತಿ/ಕವಿಯ ಸ್ಥಳ, ಕಾಲ, ಕೃತಿ, ಪ್ರಶಸ್ತಿ/ಬಿರುದುಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** **3*1=3**

12. ಎಂ.ಗೋವಿಂದ ಪೈ

**VI. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು ಸಮನ್ವಯಿಸಿ.** **3*1=3**

13. ಮನೋರಮೆಯ ಹಣೆ ಬಾಲಚಂದ್ರನಂತೆ ಆಕರ್ಷಣೀಯವಾಗಿತ್ತು.

**VII. ಸಂದರ್ಭಸಹಿತ ಸ್ವಾರಸ್ಯ ಬರೆಯಿರಿ.** **3*1=3**

14. “ನನ್ನ ಹತ್ತಿರ ಇರುವುದು ಇದೊಂದೇ ಸೀರೆ”

**VIII. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿರಿ.** **4*1=4**

15. ನಾಡಿಗಾಗಿ ____________________

______________________________

______________________________

____________________ ಪಯಣದಲ್ಲಿ

**ಅಥವಾ**

ಆಕಾಶಕ್ಕೆದ್ದು ____________________

______________________________

______________________________

____________ಯಂತ್ರಘೋಷವೇಳುವಲ್ಲಿ

**IX.ಈ ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ.**

16. ಹೀನಕೃತ್ಯಗಳ ಮಾಡುತ ನದಿಯಲಿ **4*1=4**
ಸ್ನಾನವ ಮಾಡಿದರೇನು ಫಲ
ಶ್ರೀನಿಧಿ ಪುರಂದರವಿಠಲನ ನೆನೆಯದೆ
ಮೌನವ ಮಾಡಿದರೇನು ಫಲ

**X. ಈ ಕೆಳಗಿನ ಪ್ರಶ್ನೆಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **4*1=4**

17. ಕರೀಮ ಧನವಂತನಾದ ಬಗೆ ಹೇಗೆ? ವಿವರಿಸಿ.

**ಅಥವಾ**

ರಹೀಮನಿಗೆ ಮಗ್ಗದ ಬಗ್ಗೆ ದ್ವೇಷ ಉಂಟಾಗಲು ಕಾರಣವೇನು? ವಿವರಿಸಿ.

**XI. ಈ ಕೆಳಗಿನ ಯಾವುದಾದರೂ ಒಂದು ಪ್ರಶ್ನೆಗೆ ಉತ್ತರಿಸಿ.** **1*5=5**

18.ಅ) ನಿಮ್ಮನ್ನು ಕೊಪ್ಪಳದ ಗವಿಸಿದ್ದೇಶ್ವರ ಪ್ರೌಢಶಾಲೆಯಲ್ಲಿ ಓದುತ್ತಿರುವ 'ಸುರಭಿ' ಎಂದು ಭಾವಿಸಿಕೊಂಡು ನಿಮ್ಮ ಅಣ್ಣನ ಮದುವೆಗೆ ಹೋಗಲು 3ದಿನ ರಜೆ ಕೋರಿ ಮುಖ್ಯೋಪಾಧ್ಯಾಯರಿಗೊಂದು ಪತ್ರ ಬರೆಯಿರಿ.

**ಅಥವಾ**

ಆ) ಕೆಳಗೆ ಕೊಟ್ಟಿರುವ ವಿಷಯವನ್ನು ಕುರಿತು ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.

**ರಾಷ್ಟ್ರೀಯ ಹಬ್ಬಗಳ ಮಹತ್ತ್ವ**

*****